**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –2

**CC No**: 398/2021 ಚಾಸ– 1

| | |
|---|---|
| ಹೆಸರು | ಅಶ್ವಿನಿ ನಾಯಕ್ |
| ತಂದೆ/ಗಂಡನ ಹೆಸರು | **ನಾಗಪ್ಪ ನಾಯಕ್** |
| ವಯಸ್ಸು | **32 ವರ್ಷ** |
| ಉದ್ಯೋಗ | ಪಿ ಎಸ್ ಐ, ಸಂಚಾರಿ ಪೊಲೀಸ್ ಠಾಣೆ, ಚನ್ನರಾಯಪಟ್ಟಣ. |
| ವಾಸಸ್ಥಳ | ಚನ್ನರಾಯಪಟ್ಟಣ. |

ದಿನಾಂಕಃ 18.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನಾನು ದಿಃ 02.07.2021 ರಿಂದ 19.06.2023 ರವರೆಗೆ ಹಳ್ಳಿಮೈಸೂರು ಪೊಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05.07.2021 ರಂದು ಮಧ್ಯಾಹ್ನ 3–00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಖಚಿತ ಬಾತ್ಮಿ ಬಂದಿದ್ದು, ಅರದಲ್ಲಿ ಯಾರೋ ವ್ಯಕ್ತಿಗಳು ಅಶೋಕ ಲೈಲ್ಯಾಂಡ್ ವಾಹನ ಸಂಖ್ಯೆ ಕೆ ಎ –54–5317ನೇದ್ದರಲ್ಲಿ ಸುಮಾರು 5–6 ಜಾನುವಾರುಗಳನ್ನು ಹಾಕಿಕೊಂಡು ಒಡನಹಳ್ಳಿ ಜೋಡಿಗುಬ್ಬಿ ಮಾರ್ಗವಾಗಿ ಖಾಸಯಿ ಖಾನೆ ಸಾಗಿಸುತ್ತಿರುತ್ತಾರೆ ಎಂದು ತಿಳಿದ್ದು, ಆ

ಮೇರೆಗೆ ನಾನು ಚಾಸಾ 2 ಮತ್ತು 3 ಹಾಗೂ ಪಂಚರಾದ ಚಾಸಾ 5 ಮತ್ತು 6 ರವರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟು ಮಳ್ಳಿಗನಹಳ್ಳಿ ಗ್ರಾಮದ ನಾಗರಾಜು ರವರ ಮನೆಯಿಂದ ಸ್ವಲ್ಪ ದೂರದಲ್ಲಿ ಕಾಯತ್ತಾ ನಿಂತಿದ್ದಾಗ ಜೋಡಿಗುಬ್ಬಿ ಕಡೆಯಿಂದ ಮಾಹಿತಿಯಲ್ಲಿ ಹೇಳಿದ ವಾಹನ ಬಂದಿದ್ದು, ಸದರಿ ವಾಹನವನ್ನು ತಡೆದು ನಿಲ್ಲಿಸಿ ತಪಾಸಣೆ ಮಾಡಿದಾಗ ಅದರಲ್ಲಿ ಚಾಲಕ ಸೇರಿ ಇನ್ನೊಬ್ಬ ವ್ಯಕ್ತಿ ವಾಹನದ ಹಿಂಭಾಗದಲ್ಲಿ 7 ದನಗಳು, ಅವುಗಳಲ್ಲಿ 3 ಎಮ್ಮೆ, 1 ಒಂದು ಕೋಣ ಹಾಗೂ 3 ಕರುಗಳು ಇರುವುದು ಕಂಡುಬಂದಿತು. ಸದರಿ ವ್ಯಕ್ತಿಗಳ ಹೆಸರು ವಿಳಾಸ ಕೇಳಲಾಗಿ ಅವರು ತಮ್ಮ ಹೆಸರುಗಳನ್ನು ಮೊಹಮ್ಮದ್ ಯಾಸೀನ್ ಹಾಗೂ ವಿಶ್ವಾಸ್ ಎಂದು ತಿಳಿಸಿದ್ದು, ಪರವಾನಿಗೆ ಬಗ್ಗೆ ವಿಚಾರಿಸಲಾಗಿ ಇಲ್ಲ ಎಂದು ಹೇಳಿದರು. ಆರೋಪಿತರು ಸದರಿ ಜಾನುವಾರಗಳನ್ನು ತುಂಬಾ ಕ್ರೂರ ರೀತಿಯಲ್ಲಿ ವಾಹನದೊಳಗೆ ಕಟ್ಟಿ ಹಾಕಿದ್ದು, ಕಂಡು ಬಂದಿತು.

ನಂತರ ನಾನು ಸ್ಥಳದಲ್ಲಿ ವರದಿಯನ್ನು ತಯಾರಿಸಿ ಚಾಸಾ 2 ರವರ ಮೂಲಕ ಠಾಣೆಗೆ ಕಳುಹಿಸಿ ಪ್ರ ವ ವರದಿಯನ್ನು ಪಡೆದು ನಂತರ ಪಂಚರ ಸಮಕ್ಷಮ ಸ್ಥಳ ಮಹಜರ್ ಹಾಗೂ ಅಮಾನತು ಕ್ರಮ ಜರುಗಿಸಿ ಸದರಿ ವಾಹನವನ್ನು ಜಾನುವಾರುಗಳೊಂದಿಗೆ ಅಮಾನತ್ತು ಪಡಿಸಿಕೊಂಡು ಸಾಯಂಕಾಲ 5-30 ರಿಂದ 6-30 ರವರಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ನಂತರ ಜಪ್ತಿ ಪಡಿಸಿಕೊಂಡ ವಸ್ತುಗಳು ಹಾಗೂ ಆರೋಪಿತೊಂದಿಗೆ ವಾಪಸ್ ಠಾಣೆಗೆ ಬಂದು ಮುಂದಿನ ಕ್ರಮಕ್ಕಾಗಿ ಆರೋಪಿತರು ಹಾಗೂ ಜಪ್ತಿಪಡಿಸಿಕೊಂಡ ವಾಹನ ಹಾಗೂ ಜಾನುವಾರುಗಳನ್ನು ಚಾಸಾ 11 ರವರ ಮುಂದೆ ಹಾಜರುಪಡಿಸಿರುತ್ತೇನೆ. ಮಹಜರ್ ಸಮಯಕ್ಕೆ ಪೋಟೋಗಳನ್ನೂ ಸಹಾ ತೆಗೆಸಿರುತ್ತೇನೆ. ಆ ದಿನ ನನ್ನ ಜೊತೆಗೆ ಇಲಾಖಾ ವಾಹನದ ಚಾಲಕನಾದ ಚಾಸಾ 4 ರವರೂ ಸಹಾ ಇದ್ದರು.

ಸಾಕ್ಷಿ ನಿವೇದನಾ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಆದರೆ ಸಿಡಿ ಹಾಗೂ 65(ಬಿ) ಪ್ರಮಾಣ ಪತ್ರ ಇರದೇ ಇದುದ್ದರಿಂದ ಅವುಗಳನ್ನು ನಿಶಾನೆಗೊಳಿಸಿರುವುದಿಲ್ಲ. ಸಾಕ್ಷಿ ಆರೋಪಿತರನ್ನು ನೋಡಿ ಗುರುಸಿರುತ್ತಾರೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದ :-**

ದಿಃ 05.07.2021 ರಂದು ಕೋವಿಡ್-19 ಇತ್ತು ಎಂದರೆ ನೆನಪಿಲ್ಲ. ಆ ಸಮಯದಲ್ಲಿ ಕೇವಲ ಆಹಾರ ಮತ್ತು ಹಾಲಿನ ವಾಹನಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಾಹನಗಳ ಸಂಚಾರಗಳನ್ನು ಕಡ್ಡಾಯವಾಗಿ ನಿಯಂತ್ರಿಸಲಾಗಿತ್ತು ಎಂದರೆ ಸಾಕ್ಷಿ ಆ ದಿನಾಂಕದಂದು ಇತ್ತೊ ಇಲ್ಲವೋ ನೆನಪಿಲ್ಲ ಎಂದು ನುಡಿಯುತ್ತಾರೆ. ಠಾಣೆಯಿಂದ ಹೊರಟಾಗ ಮದ್ಯಾಹ್ನ 3-10 ಗಂಟೆಯಾಗಿತ್ತು. ಹೊಗುವ ದಾರಿಯಿಂದಲೇ ನಾವು ಪಂಚರನ್ನು ಕರೆದುಕೊಂಡು ಹೋದೆವು. ಪಂಚರು ಹಳ್ಳಿಮೈಸೂರು ಸರ್ಕಲ್ ನಲ್ಲಿ ನಿಂತಿದ್ದರು. ಇಂತಹದ್ದೇ ಜಾಗದಲ್ಲಿ ಪಂಚರು ನಿಂತಿದ್ದರು ಎಂದು ನಾನು ದೂರಿನಲ್ಲಿಯಾಗಲೀ ಅಥವಾ ಪಂಚನಾಮೆಯಲ್ಲಿಯಾಗಲೀ ಹೇಳಿಲ್ಲ. ವಾಹನ ನಮ್ಮ ಎದುರುಗಡೆ ಬರುತ್ತಿದ್ದು, ನಾವು ಕೈ ತೋರಿಸಿದ ತಕ್ಷಣ ನಿಲ್ಲಿಸಿದರು, ತಪ್ಪಿಸಿಕೊಳ್ಳುವ ಪ್ರಯತ್ನ ಏನೂ ಮಾಡಿಲ್ಲ. ಇಲಾಖಾ ವಾಹನದಲ್ಲಿಯೇ ನಮ್ಮ ಜೊತೆಗೆ ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ಅನ್ನು ತೆಗೆದುಕೊಂಡು ಹೋಗಿದ್ದೆವು. ಪೊರ್ಟೇಬಲ್ ಪ್ರಿಂಟರ್ ಆಗಿದ್ದರಿಂದ ಅದಕ್ಕೆಪ್ರತ್ಯೇಕವಾಗಿ ಬ್ಯಾಟರಿಯ

ಅವಶ್ಯಕತೆ ಇಲ್ಲ, ಸ್ಥಳದಲ್ಲಿಯೇ ಪ್ರಿಂಟ್ ತೆಗೆದಿರುತ್ತೇನೆ. ಲ್ಯಾಪ್ ಟಾಪ್ ಹಾಗೂ ಪ್ರಿಂಟರ್ ಅನ್ನು ಜೊತೆಗೆ ತೆಗೆದುಕೊಂಡು ಹೋಗಿದ್ದೆವು ಎಂದು ನಿವೇದನಾ ಪತ್ರದಲ್ಲಿ ಹೇಳಿಲ್ಲ.

ಚಾಸಾ 2 ರವರು ಆ ದಿನ ಬೇರೆಯವರ ವಾಹನದಲ್ಲಿ ಠಾಣೆಗೆ ನಿವೇದನಾ ಪತ್ರವನ್ನು ತೆಗೆದುಕೊಂಡು ಹೋಗಿದ್ದರು. ವಾಹನದ ವಿರಣೆಗಳು ನನಗೆ ಗೊತ್ತಿಲ್ಲ. ವಾಪಸ್ ಚಾಸಾ 2 ರವರು ತಮ್ಮ ಬೈಕಿನಲ್ಲಿ ಘಟನಾ ಸ್ಥಳಕ್ಕೆ ಬಂದರು. ಸದರಿ ಬೈಕ್ ಸಂಖ್ಯೆ ಯನ್ನು ನನಗೆ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಆರೋಪಿತರ ಗುರುತಿನ ಚೀಟಿಯನ್ನು ಮತ್ತು ವಾಹನದ ಆರ್.ಸಿ. ಪುಸ್ತಕವನ್ನು ನಾನು ಪಡೆದುಕೊಂಡಿಲ್ಲ. ಜಾನುವಾರುಗಳ ಬಗ್ಗೆ ನಾನು ವಿಚಾರಿಸಿದೆ, ಆದರೆ ಅವರು ಯಾವುದೇ ವಿಷಯಗಳನ್ನು ನನಗೆ ಹೇಳಲಿಲ್ಲ. ಹೋರಿ ಕರುಗಳು ಸೀಮೆಯದ್ದ ಅಥವಾ ನಾಟಿಯದ್ದ ಎಂದು ನನಗೆ ಹೇಳಲು ಬರುವುದಿಲ್ಲ. ಯಾವ ಜಾತಿಗೆ ಸೇರಿದ ಕೋಣಗಳು ಎಂದು ನನಗೆ ಗೊತ್ತಿಲ್ಲ. ಮೂರು ಎಮ್ಮೆಗಳಿಗೆ ತುಂಬಾ ವಯಸ್ಸು ಏನೂ ಅಗಿರಲಿಲ್ಲ, ಸುಮಾರು 5 ವರ್ಷ ವಯಸ್ಸಿನವುಗಳು ಇರಬಹುದು. ವಾಹನದಿಂದ ಜಾನುವಾರುಗಳನ್ನು ಕಳೆಗೆ ಇಳಿಸಿ ಪೋಟೋ ತೆಗೆದಿಲ್ಲ.

ಪಂಚರಿಗೆ ನೋಟಿಸು ಕೊಟ್ಟಿದ್ದೆ. ಆ ದಿನ ನಾನು ಯಾವುದೇ ರೇಡ್ ಮಾಡಿಲ್ಲ, ನಾನು ಹೇಳುವಂತೆ ಯಾವುದೇ ಹಸುಗಳನ್ನು ಮತ್ತು ವಾಹನವನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ವಾಹನದಲ್ಲಿ ಯಾವುದೇ ಜಾನುವಾರಗಗಳನ್ನು ಸಾಗಾಣಿಕೆ ಮಾಡುತ್ತಿರಲಿಲ್ಲಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ನಾನು ಆರೋಪಿತರನ್ನು

ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ವರದಿ ತಯಾರಿಸಿ ಆರೋಪಿತರ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ, ಕೇಸಿಗೋಸ್ಕರ ಎಲ್ಲವನ್ನೂ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.